32. ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ 2001-2002ರ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು:- ಮಂಡಿಸಲಾಯಿತು.

XIV ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಹಾಗೂ ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು): ಅವರು

1956ರ ಕಂಪನಿ ಕಾಯ್ದೆ ಅಧಿನಿಯಮ 619(ಎ) ಪ್ರಕರಣದ ಮೇರೆಗೆ:-

33. ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆ ಬೆಂಗಳೂರು 21ನೇ ವಾರ್ಷಿಕ ವರದಿ 2000-2001ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುವುದು.

XV ಶ್ರೀ ಬಸವರಾಜ್ ಹೆಚ್. ಪಾಟೀಲ (ಇಂಧನ ರಾಜ್ಯ ಸಚಿವರು):- ಅವರು

1956ರ ಕಂಪನಿ ಕಾಯ್ದೆ ಅಧಿನಿಯಮ 619(ಎ)ರ ಪ್ರಕರಣದ ಮೇರೆಗೆ:-

34. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 2000-2001ನೇ ಸಾಲಿನ ವಾರ್ಷಿಕ ವರದಿ.

35. ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ 2000-2001ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ವರದಿ.

1999ರ ಕರ್ನಾಟಕ ವಿದ್ಯುಚ್ಛಕ್ತಿ ಅಧಿನಿಯಮದ ಅನುಸೂಚಿ ಭಾಗ 1ರ ಕಂಡಿಕೆ 5ರ ಮೇರೆಗೆ:-

36. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ 2000-2001ನೇ ಸಾಲಿನ ಲೆಕ್ಕಪತ್ರ ಹಾಗೂ 2ನೇ ವಾರ್ಷಿಕ ವರದಿ 2000-2001ಯನ್ನು ಮಂಡಿಸುವುದು.

ಟಿ. ರಾಜಣ್ಣ
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ವಿಷಯ:- ಕೊಪ್ಪಳದಲ್ಲಿ ಡಾ: ಅಂಬೇಡ್ಕರ್ ಪ್ರತಿಮೆಗೆ ಕೆಲವು ದುಷ್ಕರ್ಮಿಗಳು ಅವಮಾನ ಮಾಡಿರುವ ಬಗ್ಗೆ.

ಶ್ರೀ ಬಿ. ಸೋಮಶೇಖರ್(ಮಳವಳ್ಳಿ):- ಸನ್ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮಂಗಳವಾರ ಕೊಪ್ಪಳದಲ್ಲಿ ಡಾ।। ಅಂಬೇಡ್ಕರ್ ಪ್ರತಿಮೆಗೆ ಕೆಲವು ದುಷ್ಕರ್ಮಿಗಳು ಅವಮಾನ ಮಾಡಿದ್ದರಿಂದ, ಅಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ. ಅಲ್ಲಿ ಜನರು ಬೀದಿಗಳಲ್ಲಿ ಮೆರವಣಿಗೆ ಮಾಡಿಕೊಂಡು

ಅಲ್ಲಿರತಕ್ಕಂಥ ಅಂಗಡಿಗಳನ್ನು ಬಂದ್ ಮಾಡಿ ಪ್ರಕ್ಷುಬ್ಧ ವಾತಾವರಣವನ್ನು ಸೃಷ್ಟಿ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ,ಈ ಸಂದರ್ಭದಲ್ಲಿ ಮಾನ್ಯ ಗೃಹ ಮಂತ್ರಿಗಳು ಸಭೆಯಲ್ಲಿ ಇದ್ದರೆ ಒಳ್ಳೆಯದು. ಆದ್ದರಿಂದ, ಗೃಹ ಮಂತ್ರಿಗಳನ್ನು ಸಭೆಗೆ ಕರೆಸಿ.

ಅಧ್ಯಕ್ಷರು:- ಮಾನ್ಯ ಮುಖ್ಯ ಸಚೇತಕರೇ ಮಾನ್ಯ ಗೃಹ ಮಂತ್ರಿಯವರನ್ನು ಸಭೆಗೆ ಕರೆಸಿ

ಶ್ರೀ ಪಿ.ಆರ್. ಸಗೀರ್ ಅಹಮದ್:- ಗೃಹ ಇಲಾಖೆಗೆ ಸಂಬಂಧಪಟ್ಟಂಥ ವಿಷಯ ವಿಧಾನ ಪರಿಷತ್ತಿನಲ್ಲಿ ಚರ್ಚೆ ಆಗುತ್ತಿದೆ. ಆದ್ದರಿಂದ, ಮಾನ್ಯ ಗೃಹ ಮಂತ್ರಿಯವರು ಅಲ್ಲಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಎಲ್ಲಾ ವಿಷಯಗಳು ಮೇಲ್ಮನೆಯಲ್ಲಿ ಚರ್ಚೆ ಆಗುವುದಾದರೆ ಶೂನ್ಯ ವೇಳೆಯಲ್ಲಿ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿ ಉತ್ತರ ಪಡೆದು ಕೊಳ್ಳತಕ್ಕಂಥದ್ದು ನಮಗೆ ಬೇಡವೆ? ಯಾವಾಗ ಕೇಳಿದರೂ ಸಹ ವಿಧಾನ ಪರಿಷತ್ತಿನಲ್ಲಿ ಇದ್ದಾರೆ ಎಂದು ಹೇಳುತ್ತಾರೆ. ಆದ್ದರಿಂದ, ವಿಧಾನ ಪರಿಷತ್ತನ್ನು ನಡೆಸಿ, ವಿಧಾನ ಸಭೆಯಲ್ಲಿ ನಾವು ಕೇಳತಕ್ಕಂಥ ಪ್ರಶ್ನೆಗಳಿಗೆ ಉತ್ತರವನ್ನು ವಿಧಾನ ಪರಿಷತ್ತಿನಲ್ಲಿಯೇ ಕೊಡಿಸಿ, ನಾವು ಅಲ್ಲಿಂದ ಕಾಪಿಯನ್ನು ತರಿಸಿಕೊಳ್ಳುತ್ತೇವೆ. ನಾವು ಈಗಾಗಲೇ ಸದರಿ ವಿಷಯದ ಬಗ್ಗೆ ಮಾತನಾಡುವುದಕ್ಕೋಸ್ಕರ ತಮಗೆ ನೋಟೀಸ್ ಕೊಟ್ಟಿದ್ದೇವೆ. ಇಂಥ ಸಂದರ್ಭದಲ್ಲಿಯೂ ಕೂಡ ಇಲ್ಲಿ ಸಂಬಂಧಪಟ್ಟಂಥವರು ಇಲ್ಲದಿದ್ದರೆ ಹೇಗೆ?

ಅಧ್ಯಕ್ಷರು:- ಸಾಮಾನ್ಯವಾಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ತಪ್ಪಿಸಿಕೊಳ್ಳುವುದಿಲ್ಲ.

ಶ್ರೀ ಬಿ. ಸೋಮಶೇಖರ್:- ಈ ವಿಷಯಕ್ಕೆ ಸಂಬಂಧಪಟ್ಟಂಥ ರಿಪೋರ್ಟ್‌ನ್ನು ತರಿಸಿಕೊಳ್ಳುತ್ತೇನೆ. ಆದ್ದರಿಂದ ನಾಳೆ ತೆಗೆದುಕೊಳ್ಳಿ ಎಂದು ಮಾನ್ಯ ಸಚಿವರು ಮೊನ್ನೆ ಹೇಳಿದ್ದರು. ಆದ್ದರಿಂದ, ಇವತ್ತು ಅವರು ಬರಬೇಕಾಗಿತ್ತು. ಈ ಸಂದರ್ಭದಲ್ಲಿ ಅವರು ಬರದಿದ್ದರೆ ಹೇಗೆ? ಈಗ ಮಾನ್ಯ ಮುಖ್ಯಮಂತ್ರಿಯವರು ಬಂದಿದ್ದಾರೆ. ಆದ್ದರಿಂದ ಅವರ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು:- ಸಾಮಾನ್ಯವಾಗಿ ಮಾನ್ಯ ಗೃಹ ಮಂತ್ರಿಯವರು ತಪ್ಪಿಸಿಕೊಳ್ಳುವುದಿಲ್ಲ. ಅವರಿಗೆ ಸಂಬಂಧಪಟ್ಟಂಥ ಪ್ರಶ್ನೆ ವಿಧಾನ ಪರಿಷತ್ತಿನಲ್ಲಿರುವುದರಿಂದ, ಅವರು ಅಲ್ಲಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ಪುನಃ ನೆನ್ನೆ ಪ್ರಸ್ತಾಪ ಮಾಡಿರತಕ್ಕಂಥ ಮೂಲ ಪ್ರಶ್ನೆಯನ್ನು ಇವತ್ತೂ ಕೂಡ ಎತ್ತಿದ್ದೇನೆ. ಶೂನ್ಯ ವೇಳೆಯಲ್ಲಿ ಕೊಟ್ಟಿರತಕ್ಕಂಥ ವಿಷಯಕ್ಕೆ ಸಂಬಂಧಪಟ್ಟಂತೆ ಮರದಿ ತರಿಸಿಕೊಳ್ಳುವುದಕ್ಕೆ ಸಮಯ ಬೇಕಾಗುತ್ತದೆ. ಸಂಬಂಧಪಟ್ಟಂಥ ಮಂತ್ರಿಗಳು ಇರಬೇಕೆಂದು ಹೇಳಿದರೆ ಹೇಗೆ? ಶೂನ್ಯ ವೇಳೆಯಲ್ಲಿ ಉತ್ತರ ಕೊಡತಕ್ಕಂಥ ಸಂಪ್ರದಾಯವೂ ಕೂಡ ಇಲ್ಲ. ಹೊಸದಾಗಿ ನಾವು ಇದನ್ನು ಮಾಡಿದ್ದೇವೆ. ಮೇಲ್ಮನೆ ಮತ್ತು ಕೆಳಮನೆ ಎಂಬ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗತಕ್ಕಂಥದ್ದು ಸರಿಯಲ್ಲ. ನಾನು ತಮ್ಮಿಂದ ಇದಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇನೆ. ಶೂನ್ಯ

ವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿ ಮಂತ್ರಿಗಳು ಇಲ್ಲವೆಂದು ಹೇಳುವುದು ಸಭೆಯಲ್ಲಿ ಮಂತ್ರಿಗಳು ಇರುವುದಿಲ್ಲ ಎಂದು ಪತ್ರಿಕೆಗಳಲ್ಲಿ ಬರತಕ್ಕಂಥದ್ದು ಸರಿಯಲ್ಲ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):- ಒಂದು ರೆಗ್ಯುಲೇಟೆಡ್ ಫಂಕ್ಷನಿಂಗ್ ಇರಬೇಕಾಗುತ್ತದೆ. ನಾವು ಆ ಮನೆಯಲ್ಲಿಯೂ ಕೂಡ ಇರಬೇಕಾಗುತ್ತದೆ. ನಾನು ಕಳೆದ ಒಂದೂಮರೆ ಗಂಟೆಯಿಂದ ಮೇಲ್ಮನೆಯಲ್ಲಿದ್ದೆ. ಇಲ್ಲಿಯೂ ಶೂನ್ಯ ವೇಳೆ ನಡೆಯುತ್ತಿದೆ. ಹಾಗೆಯೇ ವಿಧಾನ ಪರಿಷತ್ತಿನಲ್ಲಿಯೂ ಕೂಡ ಶೂನ್ಯ ವೇಳೆ ನಡೆಯುತ್ತಿದೆ. ಈ ಶೂನ್ಯತೆ ನಮ್ಮೆಲ್ಲರನ್ನು ಆವರಿಸಿದೆ. ಆದ್ದರಿಂದ ಇದಕ್ಕೆ ಒಂದು ರೆಗ್ಯುಲೇಷನ್ ಬೇಕು. ಶೂನ್ಯ ವೇಳೆಯಲ್ಲಿಯಲ್ಲಿ ಯಾರು ಬೇಕಾದರೂ ಏನಾದರೂ ವಿಷಯವನ್ನು ಪ್ರಸ್ತಾಪ ಮಾಡಬಹುದು. ಪ್ರಸ್ತಾಪ ಮಾಡತಕ್ಕಂಥ ವಿಷಯದ ಬಗ್ಗೆ ಮಾನ್ಯ ಅಧ್ಯಕ್ಷರಿಗೆ 10-30 ಗಂಟೆಯೊಳಗೆ ತಿಳಿಸುತ್ತಾರೆ. ಆದರೆ. ಶೂನ್ಯ ವೇಳೆಯಲ್ಲಿ ಯಾವ ವಿಷಯ ರೈಜ್ ಮಾಡುತ್ತಾರೆ ಎನ್ನತಕ್ಕಂಥದ್ದು ನಮಗೆ ಗೊತ್ತಾಗಬೇಕಲ್ಲಾ? ಒಂದು ವೇಳೆ ಗೊತ್ತಾದಾಗ ನಾವು ಇಲ್ಲಿರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಎರಡು ಸಭೆಯಲ್ಲಿ ಇದು ಆಗಬೇಕಾಗಿದೆ. ತಾವು ಈ ಎಲ್ಲಾ ತೊಂದರೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ, ತಾವು ಈ ಸ್ಥಾನದಲ್ಲಿ ಕುಳಿತುಕೊಂಡು ಕೆಲಸ ಮಾಡಿದ್ದೀರಿ.

ಶ್ರೀ ಬಿ. ಸೋಮಶೇಖರ್:- ಮಾನ್ಯ ಅಧ್ಯಕ್ಷರೆ, ಈ ವಿಚಾರವನ್ನು ನಾನು ಮೊನ್ನೆ ದಿವಸವೇ ಪ್ರಸ್ತಾಪ ಮಾಡುತ್ತಿದ್ದಾಗ, ಮಾನ್ಯ ಗೃಹ ಮಂತ್ರಿಗಳು ಈ ಸಂದರ್ಭದಲ್ಲಿ ಇಲ್ಲಿದ್ದು. ಈ ವಿಚಾರಕ್ಕೆ ಸಂಬಂಧಪಟ್ಟಂತೆ ವರದಿಯನ್ನು ತರಿಸಿಕೊಳ್ಳುತ್ತೇನೆ. ಆದ್ದರಿಂದ ನಾಳೆ ದಿವಸ ತೆಗೆದುಕೊಳ್ಳೋಣವೆಂದು ಹೇಳಿದ್ದರು. ಈ ವಿಷಯವನ್ನು ನೆನ್ನೆ ದಿವಸವೇ ತೆಗೆದುಕೊಳ್ಳಬೇಕಾಗಿತ್ತು. ಆದರೆ ಇವತ್ತು ತೆಗೆದುಕೊಳ್ಳಲಾಗಿದೆ. ಈ ವಿಷಯ ನಿಮಗೆ ಗೊತ್ತಿಲ್ಲ.

ಅಧ್ಯಕ್ಷರು:- ಸಾಮಾನ್ಯವಾಗಿ ಮಾನ್ಯ ಗೃಹ ಮಂತ್ರಿಯವರು ಇಲ್ಲಿರುತ್ತಾರೆ. ಆದರೆ, ಇವತ್ತು ಅವರ ಇಲಾಖೆಗೆ ಸಂಬಂಧಪಟ್ಟಂಥ ಪ್ರಶ್ನೆ ವಿಧಾನಪರಿಷತ್ತಿನಲ್ಲಿರುವುದರಿಂದ, ಅವರು ಅಲ್ಲಿಯೇ ಇದ್ದಾರೆ.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಗೃಹ ಮಂತ್ರಿಯವರು ಮೇಲ್ಮನೆಯಲ್ಲಿದ್ದಾರೆ. ತಾವು ಈಗ ಹೇಳಿರತಕ್ಕಂಥ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ತರಿಸಿಕೊಡುತ್ತಾರೆ.

ಶ್ರೀ ಬಿ. ಸೋಮಶೇಖರ್:- ಮಾನ್ಯ ಅಧ್ಯಕ್ಷರೆ, ನಮ್ಮ ಕರ್ತವ್ಯದ ಪ್ರಕಾರ ಈ ವಿಷಯವನ್ನು ಸರ್ಕಾರದ ಮತ್ತು ಈ ಸಭೆಯ ಗಮನಕ್ಕೆ ತಂದಿದ್ದೇವೆ. ಇತ್ತೀಚೆಗೆ ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆಗೆ ಕೆಲವು ದುಷ್ಕರ್ಮಿಗಳು ಅವಮಾನ ಮಾಡುತ್ತಿರುವುದು ರಾಜ್ಯದಲ್ಲಿ ಅನೇಕ ಕಡೆ ನಡೆಯುತ್ತಿದೆ. ಸರ್ಕಾರ ಇಲ್ಲಿಯವರೆಗೆ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೇ ಇರತಕ್ಕಂಥದ್ದಕ್ಕೆ ಈ ರೀತಿ ಆಗುತ್ತಿದೆ ಎಂದು ನಾವು ಭಾವಿಸಿಕೊಳ್ಳಬೇಕಾಗಿದೆ. ಮಂಗಳವಾರ ಇದ್ದಕ್ಕಿದ್ದ ಹಾಗೆ ಬೆಳಗಿನ ಸಮಯದಲ್ಲಿ ಕೆಲವು ದುಷ್ಕರ್ಮಿಗಳು ಕೊಪ್ಪಳದಲ್ಲಿ ಡಾ|| ಅಂಬೇಡ್ಕರ್ ರವರ ಪ್ರತಿಮೆಗೆ ಟೋಪಿ ಹಾಕಿ ಬಳಿ ತೊಡಿಸತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಹಾಗೆಯೇ ಬಣ್ಣದ ನೀರನ್ನು ಪ್ರತಿಮೆಯ ಮೇಲೆ ಚೆಲ್ಲಿದ್ದಾರೆ. ಅವರಿಗೆ ಅವಮಾನಕರ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಪ್ರತಿಮೆಗೆ ಬಳೆ ತೊಡಿಸಿರತಕ್ಕಂಥದ್ದನ್ನು ನೋಡಿದರೆ, ಇವತ್ತಿನ

ದಿವಸ ಹೆಣ್ಣು ಮಕ್ಕಳಿಗೆ ಬಳೆಯನ್ನು ತೊಡಿಸುತ್ತೇವೆ. ಇದರಿಂದ ಹೆಣ್ಣು ಮಕ್ಕಳಿಗೆ ಸಹ ಅವಮಾನ ಮಾಡಿದಂತೆ ಆಗಿದೆ. ಡಾ।। ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಕೇವಲ ದಲಿತ ವರ್ಗಕ್ಕೆ ಸೇರಿದಂಥ ನಾಯಕರಲ್ಲ. He is our national pride ನಮ್ಮದೇಶಕ್ಕೆ ಇವರು ಏನು ಕೊಡುಗೆ ಕೊಟ್ಟಿದ್ದಾರೆ ಎನ್ನತಕ್ಕಂಥದ್ದು ನಮಗೆಲ್ಲಾ ಗೊತ್ತಿದೆ. ಅವರು ಆಕಸ್ಮಿಕವಾಗಿ ಆ ಒಂದು ವರ್ಗದಲ್ಲಿ ಹುಟ್ಟಿರಬಹುದು.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಬಳೆಯನ್ನು ಯಾರು ತೊಡಿಸಿದ್ದಾರೆ ಅವರಿಗೆ ಡಾ।। ಅಂಬೇಡ್ಕರ್ ಯಾರು ಎನ್ನುವುದು ಗೊತ್ತಿರಬೇಕಲ್ಲಾ?

ಶ್ರೀ ಬಿ. ಸೋಮಶೇಖರ್:- ಯಾರು ಬಳೆ ತೊಡುತ್ತಿದ್ದಾರೆ ಅವರ ಬಗ್ಗೆ ನಾನು ಮಾತನಾಡುತ್ತಿಲ್ಲ. ಯಾವ ಒಂದು ವಾತಾವರಣ, ಯಾವ ಒಂದು ಮನೋಭಾವ ನಮ್ಮ ಸಮಾಜದಲ್ಲಿ ನಿರ್ಮಾಣವಾಗಿದೆ. ಅದನ್ನು ತಡೆಗಟ್ಟತಕ್ಕಂಥ ಜವಾಬ್ದಾರಿ ಯಾರದ್ದು? ಇದರ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಶ್ರೀ ಎಂ.ಎನ್. ವೆಂಕಟಾಚಲಯ್ಯನವರು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿದ್ದಾಗ ಒಂದು ಸಂದರ್ಭದಲ್ಲಿ ಹೇಳುತ್ತಾರೆ. ಒಂದು ತೀರ್ಪು ಕೊಡುವಾಗ, ಕ್ಲಿಷ್ಟ ಪರಿಸ್ಥಿತಿಗೆ ಸಿಕ್ಕಿದಾಗ ಡಾ।। ಅಂಬೇಡ್ಕರ್‌ರವರು ಕಾನ್‌ಸ್ಟಿಟ್ಯೂಷನ್ ಮೇಲೆ ಮಾತನಾಡಿರತಕ್ಕಂಥ ಪೊಸೀಡಿಂಗ್ಸ್‌ನ್ನು ಓದುತ್ತೇನೆ. ಅವರು ಸಂವಿಧಾನವನ್ನು ಯಾವರೀತಿಯಾಗಿ ಬರೆದಿದ್ದಾರೆ. ಯಾವುದೇ ಕ್ಲಿಷ್ಟ ಪರಿಸ್ಥಿತಿ ಇದ್ದಾಗ ಯಾವ ರೀತಿಯಾಗಿ ಸಮಸ್ಯೆಯನ್ನು ನಿಭಾಯಿಸುತ್ತಿದ್ದರು ಎನ್ನುವುದರ ಬಗ್ಗೆ ಅವರು ಹೇಳಿರುವ ವಿಚಾರವನ್ನು ನನ್ನ ಸಹಾಯಕ್ಕಾಗಿ ಪಡೆದುಕೊಳ್ಳುತ್ತೇನೆ ಎನ್ನುವುದನ್ನು ಹೇಳಿದ್ದಾರೆ. ಇಂತಹ ವ್ಯಕ್ತಿಗೆ ಎಲ್ಲಾ ದುಷ್ಕರ್ಮಿಗಳು ಅವಮಾನ ಮಾಡತಕ್ಕಂಥದ್ದು, ಅದರಿಂದ ಸ್ಯಾಟಿಸ್‌ಫ್ಯಾಕ್ಷನ್ ಮಾಡಿಕೊಳ್ಳತಕ್ಕಂಥದ್ದು ಏನಿದೆ ಇದು ನಿಜವಾಗಲೂ ಕೂಡ ಅವರಿಗಷ್ಟೇ ಅಲ್ಲ ಇಡೀ ದೇಶಕ್ಕೆ , ನಮ್ಮ ರಾಜ್ಯಕ್ಕೆ ಹಾಗೂ ನಮೆಲ್ಲರಿಗೂ ಅವಮಾನ ಮಾಡಿದಂತಾಗಿದೆ. ಅದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಇದೊಂದೇ ಕಡೆ ಅಲ್ಲ. ಹೀಗೆ ಅನೇಕ ಕಡೆ ಆಗಿದೆ. ಅದನ್ನು ನೋಡಿ ದಲಿತರು ಒಂದು ಮೆರವಣಿಗೆ ಹೋಗಿ, ಇದಕ್ಕೆ ಸರ್ಕಾರದ ವೈಫಲ್ಯವೇ ಕಾರಣ. ಈ ದುಷ್ಕರ್ಮಿಗಳನ್ನು ಗುರುತಿಸುವುದಕ್ಕೆ ಸರ್ಕಾರಕ್ಕೆ ಸಾಧ್ಯ ಆಗಿರುವುದಿಲ್ಲ. ಅವರ ಮೇಲೆ ಕ್ರಮ ತೆಗೆದುಕೊಂಡಿಲ್ಲವೆಂದು ಬೀದಿಯಲ್ಲೆಲ್ಲಾ ಕೂಗಾಡಿ ಪ್ರಚಾರ ಮಾಡಿರುತ್ತಾರೆ. ನಿನ್ನೆ ದಿವಸ ಹುಬ್ಬಳ್ಳಿಯಲ್ಲಿ ದೊಡ್ಡ ಪ್ರತಿಭಟನೆಯಾಗಿದೆ. ಇದು ದಿನದಿಂದ ದಿನಕ್ಕೆ ಬೆಂಕಿಹಚ್ಚಿಕೊಂಡು ಹೋಗುತ್ತಿದೆ. ಡಾ।। ಅಂಬೇಡ್ಕರ್ ಅವರ ಪ್ರತಿಮೆಗೆ ಇಂಥದೊಂದು ಅವಮಾನ ಏಕೆ? ಬೇರೆ ಯಾವ ಪ್ರತಿಮೆಗಳಿಗೂ ಈ ರೀತಿ ಆಗುತ್ತಿಲ್ಲ. ಇದನ್ನು ಸರ್ಕಾರ ಬಹಳ ತೀವ್ರಗತಿಯಲ್ಲಿ ಗಮನಿಸಬೇಕಾಗುತ್ತದೆ. ಕಂಬಾಲಪಲ್ಲಿಯಲ್ಲಿ ದಲಿತರ ಮೇಲೆ ಕಗ್ಗೊಲೆಯಾಗಿ ಏಳು ಜನರು ಮೃತಪಟ್ಟರು. ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಪಕ್ಕ ಪಕ್ಕದಲ್ಲಿಯೇ ಅವರ ಪ್ರತಿಮೆಗಳಿಗೆ ಅವಮಾನವಾಗುತ್ತಿದೆ. ನಮ್ಮ ಮಾನ್ಯ ಗೃಹ ಸಚಿವರು ಆ ಗುಲ್ಬರ್ಗ ಭಾಗದಿಂದ ಬಂದವರು. ಅಂತಹ ಕಡೆ ಈ ರೀತಿ ಆಗುತ್ತದೆಂದರೆ, ಮಾನ್ಯ ಗೃಹ ಸಚಿವರ ಮೇಲೆ ಮತ್ತು ಸರ್ಕಾರದ ಮೇಲೆ ಇಂತಹ ಸಮಾಜಘಾತಕ ಶಕ್ತಿಗಳಿಗೆ ಭಯವಿಲ್ಲ ಎನ್ನುವುದು ಗೊತ್ತಾಗುತ್ತದೆ. ಈ ಸರ್ಕಾರ ಬಂದಮೇಲೆ ಇಷೊಂದು ಭೀತಿ ಇಲ್ಲದೆ ಇಂತಹ ಕೃತ್ಯಗಳು ನಡೆಯುತ್ತಿವೆ. ನನ್ನ ದೃಷ್ಟಿಯಲ್ಲಿ

ಇದಕ್ಕೆ ಸರ್ಕಾರದ ವೈಫಲ್ಯವೇ ಕಾರಣ, ಇದರ ಬಗ್ಗೆ ದಲಿತ ಸಂಘಟನೆಗಳೂ ಕೂಡ ಬೀದಿಯಲ್ಲಿ ಪ್ರಚಾರ ಮಾಡಿ ಹೇಳಿವೆ. ಇದಕ್ಕೆ ಏನಾದರೂ ಒಂದು ಕ್ರಮವನ್ನು ಕೈಗೊಳ್ಳಬೇಕು. ಏನು ಕ್ರಮವನ್ನು ಕೈಗೊಳ್ಳಬೇಕು? ಯಾವ ರೀತಿಯಾಗಿ ಆ ಪ್ರತಿಮೆಗಳಿಗೆ ರಕ್ಷಣೆ ಕೊಡಬೇಕು? ಸೂಕ್ಷತೆ ಇರತಕ್ಕಂಥ ಪ್ರತಿಮೆಗಳಿಗೆ ಫೆನ್ಸಿಂಗ್ ಹಾಕತಕ್ಕಂಥದ್ದು, ಯಾರೂ ಹತ್ತಿರ ಹೋಗದಿರುವಂತೆ ದುಷ್ಕರ್ಮಿಗಳು ಬಂದಾಗ ಅವರ ಫೋಟೋ ತೆಗೆದುಕೊಳ್ಳುವಂಥದ್ದು, ಅಂತಹ ಒಂದು ಎಕ್ವಿಪ್‌ಮೆಂಟ್ ಅಳವಡಿಸತಕ್ಕಂಥದ್ದು ಆಗಬೇಕು. ಇದಕ್ಕೂ ಹೆಚ್ಚಾಗಿ ಈ ವ್ಯಾಪ್ತಿಯಲ್ಲಿ ಬರತಕ್ಕಂಥ ಪೋಲೀಸ್ ಸ್ಟೇಷನ್‌ಗಳು ಯಾವುವು ಇವೆ. ಆ ಸ್ಟೇಷನ್ ಇನ್ಸ್ ಪೆಕ್ಟರ್‌ಗಳಿಗೆ ಆಗಲೀ ಸಬ್ ಇನ್ಸ್‌ಪೆಕ್ಟರ್‌ಗಳಿಗೆ ಆಗಲೀ ಗೊತ್ತಿರುತ್ತದೆ. ಅಂತಹ ಬಡಾವಣೆಯಲ್ಲಿ ಎಂತಹ ಸಮಾಜಘಾತುಕ ಶಕ್ತಿಗಳು ಇವೆ ಅವರನ್ನು ಏಕೆ ಬಂದಿಸಬಾರದು/ ಅವರನ್ನು ಏಕೆ ವಿಚಾರಣೆ ಮಾಡಬಾರದು? ಅಂತಹದ್ದು ಒಂದು ಕಡೆಯಾಗಿದ್ದರೆ, ಅಂತಹ ಘಟನೆಗಳು ಆಗುತ್ತಿರಲಿಲ್ಲ. ನಮ್ಮ ಸ್ಥಳೀಯ ಶಾಸಕರು ಅಲ್ಲಿಗೆ ಹೋಗಿ ಬಂದಿದ್ದಾರೆ. ಅಲ್ಲಿ ನಿಜವಾಗಲೂ ಏನು ನಡೆದಿದೆ ಎನ್ನುವುದರ ಬಗ್ಗೆ ಹೇಳುತ್ತಾರೆ. ಸರ್ಕಾರ ಮೊದಲು ರಕ್ಷಣೆಯನ್ನು ಕೊಡಬೇಕು. ಇದು ಹಾಗೆಯೇ ಹತ್ತಿಕೊಂಡು ಹೋಗುವುದಕ್ಕೆ ಅವಕಾಶವನ್ನು ಕೊಡಬಾರದು. ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ನಾನು ಅಗ್ರಹಪೂರ್ವಕವಾಗಿ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ):- ಮಾನ್ಯ ಅಧ್ಯಕ್ಷರೆ, ಕೊಪ್ಪಳ ನಗರದಲ್ಲಿ 8ನೇ ತಾರೀಖು ರಾತ್ರಿ ರಾಷ್ಟ್ರದ ಮಹಾನ್ ನಾಯಕರಾದ ಡಾ।। ಅಂಬೇಡ್ಕರ್‌ರವರ ಪ್ರತಿಮೆಗೆ ಅವಮಾನ ನಡೆದ ಘಟನೆ ಅತ್ಯಂತ ಖಂಡಿನೀಯವೆಂದು ನಾನು ಭಾವಿಸುತ್ತೇನೆ. ಇದೊಂದು ವಿಷಾಧಕರ ಘಟನೆ ಎಂದು ನಾವೆಲ್ಲರು ಸಹ ಭಾವಿಸಬೇಕಾಗತ್ತದೆ. ಆ ಘಟನೆ ನಡೆದ ನಂತರ ನಾನು ತಮ್ಮ ಅಪ್ಪಣೆಯನ್ನು ಪಡೆದುಕೊಂದು ಆ ಸ್ಥಳಕ್ಕೆ ಭೇಟಿ ಕೊಟ್ಟು ಬರುತ್ತೇನೆಂದು ಹೇಳಿ ಹೋಗಿದ್ದೆ. ನಾನು ಭೇಟಿ ಕೊಟ್ಟು ಸಂದರ್ಭದಲ್ಲಿ, ಮೊದಲನೆಯದಾಗಿ ಡಾ।। ಅಂಬೇಡ್ಕರವರ ಪ್ರತಿಮೆಗೆ ಪೂಜೆಯನ್ನು ಸಲ್ಲಿಸಿ, ಒಂದು ಥಿಯೇಟರ್‌ಗೆ ಬೆಂಕಿ ಹಚ್ಚಿದ್ದರು ಅಲ್ಲಿಗೆ ಹಾಗೂ ಒಂದು ಸಣ್ಣ ಇನ್ಸಿಡೆಂಟ್ ಆಗಿರುವ ಹೋಟೆಲ್‌ಗೂ ಭೇಟಿ ಕೊಟ್ಟು , ಅಲ್ಲಿನ ಯುವ ಮುಖಂಡರ ಜೊತೆ ಚರ್ಚೆಯನ್ನು ಮಾಡಿ ಬಂದಿದ್ದು, ಆ ಘಟನೆಯ ಒಂದು ಸಂಕ್ಷಿಪ್ತ ಹಿನ್ನೆಲೆಯನ್ನು ನಾನು ಹೇಳುತ್ತೇನೆ. 5-6 ದಿವಸಗಳ ಹಿಂದೆ ಕೊಪ್ಪಳ ನಗರದಲ್ಲಿ ಮುಸ್ಲಿಂ ಸಮಾಜದ ಒಂದು ಮದುವೆಯ ಸಂದರ್ಭದಲ್ಲಿ ಡಾ।। ಅಂಬೇಡ್ಕರ್ ಭವನದಲ್ಲಿ ಅವರು ಇಳಿದುಕೊಂಡಿದ್ದರು. ಹರಿಜನ ಕೋಮಿಗೆ ಸೇರಿದ ಒಬ್ಬ ಅಳ್ಳಳ್ಳಿ ಎನ್ನುವವರ ಟ್ರಾ ಕ್ಟರ್‌ನ ಬೋಲ್ಟ್ ಮತ್ತು ನಟ್ಟನ್ನು ಹೋಗಿಬಿಚ್ಚಿದೆ. ಆಗ ಆ ಟ್ರಾ ಕ್ಟರ್ ಮಾಲೀಕರು ಆ ಮಗುವಿಗೆ ಹೊಡೆದಿದ್ದಾರೆ. ಆ ಮಗುವಿಗೆ ಹೊಡೆಯುವುದನ್ನು ಆ ತಾಯಿ ನೋಡಿದ್ದಾಳೆ. ಅವನಿಗೆ ಹೊಡೆಯಬೇಡಿ ಎಂದು ಹೇಳಿದ್ದಾಳೆ. ಆ ಹೆಣ್ಣುಮಗಳಿಗೂ ಕೂಡ ಆ ಮಾಲೀಕರು ಹೊಡೆದಿದ್ದಾರೆ. ಅವಳು ಆಸ್ಪತ್ರೆಯಲ್ಲಿ ಆಡ್ಮಿಟ್ ಆಗಿದ್ದಾಳೆ. ಪೋಲೀಸ್ ಕಂಪ್ಲೇಂಟ್ ಕೊಟ್ಟಿದ್ದಾರೆ. ಇದರಲ್ಲಿ ಒಂದು ಸಣ್ಣ ತಪ್ಪಾಗಿದೆ ಎಂದು ಭಾವಿಸಬೇಕು. ಇದರಲ್ಲಿ ನಾವು ರಾಜಕೀಯ ಮಾಡುವುದಕ್ಕೆ ಹೋಗುವುದಿಲ್ಲ. ಕಂಪ್ಲೇಂಟ್ ತೆಗೆದುಕೊಂಡ ಮೇಲೆ ಪೋಲೀಸ್‌ರು ಜಾಮೀನಿನ ಮೇಲೆ ಬಿಟ್ಟಿದ್ದಾರೆ. ಹೆಣ್ಣು ಮಗಳಿಗೆ ಇಷ್ಟೊಂದು ಅವಮಾನವಾಗಿದೆ ಎಂದು ಆ ಸಮಾಜದವರು ಇದರಲ್ಲಿ ಪೋಲೀಸರು ಅಸಹಾಯಕತೆಯನ್ನು ತೋರಿಸಿದ್ದಾರೆ ನಂತರ

ಸಮಾಜದವರು ಪರ್ಟಿಕ್ಯುಲರ್ ಆಗಿ ಯಾರು ತೊಂದರೆ ಕೊಟ್ಟಿದ್ದರು ಅವರ ಮನೆ ಮುಂದೆ ಹೋಗಿ ಪ್ರತಿಭಟಿಸಿದ್ದಾರೆ. ಅಲ್ಲಿ ಯಾರೂ ಅವರ ಕೈಗೆ ಸಿಕ್ಕಿರುವುದಿಲ್ಲ. ಆ ಕಾರಣದ ಹಿನ್ನೆಲೆಯಲ್ಲಿ ಅವರೂ ಕೂಡ ಕಾನೂನನ್ನು ಕೈಗೆ ತೆಗೆದುಕೊಳ್ಳಬಾರದಾಗಿತ್ತು. ಈ ಕಾರಣದಿಂದ ಇವತ್ತು ಈ ಘಟನೆ ಆಗಿದೆ. ಆದ್ದರಿಂದ ಇದಕ್ಕೆ ನನ್ನ ಒತ್ತಾಯ ಏನೆಂದರೆ, ಆ ದುಷ್ಕರ್ಮಿಗಳು ಯಾರು? ಅವರನ್ನು ಪತ್ತೆ ಹಚ್ಚುವ ಕಾರ್ಯಕ್ರಮವನ್ನುಸರ್ಕಾರ ಹಾಕಿಕೊಳ್ಳಬೇಕಾಗುತ್ತದೆ. ಇದು ತೀವ್ರಗತಿಯಲ್ಲಿ ಆಗಬೇಕು. ಏಕೆಂದರೆ ಅದು ಮರುಕಳಿಸಬಾರದು. ಅಲ್ಲಿ ಈಗ ಪರಿಸ್ಥಿತಿ ಪೀಸ್‌ಫುಲ್ ಆಗಿದೆ. ಈಶಾನ್ಯ ವಲಯದ ಮಹಾ ನಿರ್ದೇಶಕರಾದ ಶ್ರೀ ಕೆಂಪಯ್ಯನವರು ಇದ್ದಾರೆ, ಇವರಿಗೆ, ನಮ್ಮ ಕೊಪ್ಪಳಕ್ಕೆ ಬಹಳ ಸಂಬಂಧವಿದೆ. ಹಿಂದೆ ಅವರು 1980ರಲ್ಲಿ ಕೊಪ್ಪಳದಲ್ಲಿ ಕೆಲಸವನ್ನು ಮಾಡಿದ್ದಾರೆ. ಎಲ್ಲಾ ಜನಾಂಗದ ಮುಖಂಡರೂ ಸಹ ಅವರಿಗೆ ಪರಿಚಯವಿದ್ದಾರೆ. ಈ ವಾತಾವರಣ ಕೂಡ ತಿಳಿಯಾಗುತ್ತದೆಂದು ನಾನು ನಂಬಿದ್ದೇನೆ. ಮಾನ್ಯ ಸೋಮಶೇಖರ್ ರವರು ಹೇಳಿದ ಹಾಗೆ, ಇಂತಹ ಪ್ರತಿಮೆಗಳ ರಕ್ಷಣೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಚಾರವನ್ನು ಮಾಡಬೇಕಾಗಿದೆ. ವರ್ಗವರ್ಗದಲ್ಲಿ ಭಿನ್ನಾಭಿಪ್ರಾಯಕ್ಕಿಂತ ಬೇರೆ ವರ್ಗದಲ್ಲಿ ಅದರಲ್ಲಿ ರಾಜಕೀಯ ಮಾಡಿ ಪ್ರಚೋದನಕಾರಕ ಶಕ್ತಿಯನ್ನು ಮೂಡಿಸುವ ಕೆಲಸವಾಗುತ್ತಿದೆ. ಆ ಸಮಾಜದವರೇ ಮಾಡಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಇದರ ದುರುಪಯೋಗವನ್ನು ಪಡೆಯತಕ್ಕಂಥ ಸಮಾಜದ ದುಷ್ಕರ್ಮಿಗಳು ಈ ಕೆಲಸದಲ್ಲಿ ಕೈ ಹಾಕಿದ್ದಾರೆ. ಶ್ರೀ ಬಸವಣ್ಣನವರ ಮೂರ್ತಿ ಇರಬಹುದು. ಡಾ॥ ಅಂಬೇಡ್ಕರ್‌ರವರ ಪ್ರತಿಮೆ ಇರಬಹುದು ಒಂದು ಫೋಟೋ ಬರುವಂತಹ ವ್ಯವಸ್ಥೆಯಾಗಲಿ, ಅಥವಾ ಡಿವಿಸಿ(ಮಟ್ಟದಲ್ಲಿ) ಕಛೇರಿಯ ಸಮೀಪದಲ್ಲಿ ಮಾಡುವುದು ಸೂಕ್ತವೆಂದು ಅನಿಸುತ್ತದೆ. ಕೊಪ್ಪಳದಲ್ಲಿ ನಿನ್ನೆ ದಿವಸ ನಾವು ಶಾಂತತೆಯನ್ನು ನೋಡಿದ್ದೇವೆ. ಹುಬ್ಬಳ್ಳಿ, ಧಾರವಾಡ ಮತ್ತು ಗುಲ್ಬರ್ಗಾ ನಗರದಲ್ಲಿ ದೊಂಬಿ ಹಾಗೂ ಗಲಾಟೆ ನಡೆದಿರುವುದರ ಬಗ್ಗೆ ನಾವು ಪತ್ರಿಕೆಯಲ್ಲಿ ಹಾಗೂ ವಿಡಿಯೋದಲ್ಲಿ ಕಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಎಲ್ಲಾ ವಿರೋಧ ಪಕ್ಷದವರನ್ನು ಕರೆಸಿ ಇದಕ್ಕೆ ಸೂಕ್ತವಾದ ಒಂದು ಮಾರ್ಗವನ್ನು ಕಂಡುಹಿಡಿಯಬೇಕೆಂದು ನಾನು ಹೇಳುತ್ತೇನೆ. ಕೊಪ್ಪಳದಲ್ಲಿ ದುಷ್ಕರ್ಮಿಗಳು ಈ ಒಂದು ಕೆಲಸವನ್ನು ಮಾಡಿದ್ದಾರೆ. ಅವರನ್ನು ತೀವ್ರಗತಿಯಲ್ಲಿ ಪತ್ತ ಹಚ್ಚಿ ಅವರಿಗೆ ಶಿಕ್ಷೆ ಕೊಡುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳಿ, ಅಲ್ಲಿಗೆ ಬಂದಿರುವ ಶ್ರೀ ಕೆಂಪಯ್ಯನವರು ದಕ್ಷ ಪೋಲೀಸ್ ಅಧಿಕಾರಿಗಳಿದ್ದಾರೆ. ಮತ್ತೆ ಅಂತಹ ಘಟನೆ ಮರುಕಳಿಸುವುದಲ್ಲವೆನ್ನುವ ವಿಶ್ವಾಸ ನನಗೆ ಇದೆ ಎಂದು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

1.00 ಪಿ.ಎಂ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು:- ಮಾನ್ಯ ಅಧ್ಯಕ್ಷರೆ, ಕೊಪ್ಪಳದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್‌ರವರ ಮೂರ್ತಿಯನ್ನು ಏನು ವಿರೂಪಗೊಳಿಸುವಂತಹ ಕೆಲಸವನ್ನು ಮಾಡಿದ್ದಾರೆ ಆ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವ ಸುದ್ದಿಯನ್ನು ನೋಡಿದರೆ ಇದನ್ನು ಬಹುಶಃ ಪೂರ್ವಯೋಜಿತವಾಗಿ ಮಾಡಿದ್ದಾರೆಂದು ನನಗನ್ನಿಸುತ್ತದೆ. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಇದು ಆಗುತ್ತಿದೆ. ಹಿಂದೆ ಬೆಳಗಾಂನಲ್ಲಿ ಶಿವಾಜಿ ಪುತ್ಥಳಿಗೆ ಗುಲ್ಬರ್ಗದಲ್ಲಿ ಬಸವಣ್ಣನವರ ಪುತ್ಥಳಿಗೆ ಈ ರೀತಿಯಾದ ಅಪಮಾನ ಮಾಡಿರುವಂತಹದ್ದು ಇದೆ. ಅದರಲ್ಲಿ

ಡಾ॥ ಬಿ.ಆರ್. ಅಂಬೇಡ್ಕರ್ ರವರ ನಮ್ಮ ರಾಷ್ಟ್ರನಾಯಕರು ಯಾವುದೇ ಒಂದು ಸಮಾಜಕ್ಕೆ ಸೇರಿದವರಲ್ಲ, ಅವರು ಇಡೀ ರಾಷ್ಟ್ರದ ನಾಯಕರು. ಈ ರೀತಿಯಾಗಿ ಮಹಾನಾಯಕರ ಪುತ್ಥಳಿಗೆ ಅಪಮಾನ ಮಾಡಿದರೆ ಸಮಾಜದಲ್ಲಿ ವರ್ಗ ಸಂಘರ್ಷಣೆ ಆಗಲಿಕ್ಕೆ ಸಾಧ್ಯವಿದೆ. ಯಾರೋ ಇದರ ಹಿನ್ನೆಲೆಯಲ್ಲಿದ್ದಾರೆ. ಈ ಘಟನೆಯನ್ನು ನೋಡಿದರೆ ಇದು ಪೂರ್ವನಿಯೋಜಿತದಿಂದ ಆಗಿದೆ. ಪಕ್ಕದಲ್ಲಿಯೇ ಕೆಲವು ದಿವಸಗಳ ಹಿಂದೆ ಅಲ್ಲೊಂದು ಪೋಲೀಸ್ ವ್ಯಾನ್ ನಿಲ್ಲಿಸಿದ್ದರು. ಅದನ್ನು ಇತ್ತೀಚೆಗೆ ವಿತ್‌ಡ್ರಾ ಮಾಡಿದ್ದಾರೆ. ಇದನ್ನು ನೋಡಿದರೆ ಈ ಘಟನೆ ಪೂರ್ವನಿಯೋಜಿತವಾಗಿದೆ ಅದರ ಸಲುವಾಗಿ ಸರ್ಕಾರ ಇಂತಹ ದುಷ್ಕರ್ಮಿಗಳನ್ನು ಅವರು ಯಾವುದೇ ಜನಾಂಗದವರು ಇರಲಿ, ಯಾವುದೇ ಸಮಾಜಕ್ಕೆ ಸೇರಿದವರು ಇರಲಿ ಅವರ ಮೇಲೆ ಸರಿಯಾದ ಕಠಿಣವಾದ ಕ್ರಮವನ್ನು ಕೈಗೊಳ್ಳಬೇಕು. ಈ ರೀತಿ ಮಾಡಿದರೆ ಸರಿಹೋಗುತ್ತದೆ. ಮತ್ತೆ ಇದು ಪುನರಾವರ್ತನೆಯಾಗದಂತೆ ಅದರ ಬಗ್ಗೆ ಸರ್ಕಾರ ಗಂಭೀರವಾದ ಚಿಂತನೆಯನ್ನು ಮಾಡಬೇಕು. ಇದಕ್ಕೆ ಪ್ರತಿಧ್ವನಿಯಾಗಿ ಹುಬ್ಬಳ್ಳಿ ಧಾರವಾಡ ನಗರದಲ್ಲಿ ದೊಡ್ಡ ಗೊಂದಲ ನಿರ್ಮಾಣವಾಗಿದೆ. ಜನರು ಬಂದ ಕಾರ್ಯಕ್ರಮ ನಡೆಸುವ ತೀರ್ಮಾನಕ್ಕೆ ಬಂದಿದ್ದಾರೆಂದು ಕೇಳಿದ್ದೇನೆ. ಬೆಳಗಾಂನಲ್ಲಿ ಬಂದ್ ಮಾಡಿ ಪ್ರತಿಭಟನೆಯಾಗುತ್ತಿದೆ. ಈ ಘಟನೆಯನ್ನು ನಾವೆಲ್ಲರೂ ಖಂಡಿಸಬೇಕಾಗುತ್ತದೆ. ಮತ್ತೆ ಇದು ಪುನರಾವರ್ತನೆಯಾಗದಂತೆ ತಡೆಯಬೇಕು. ನಾನು ಇನ್ನು ಕೆಲವು ವಿಷಯಗಳನ್ನು ಹೇಳುವಂತಹದ್ದು ಇದೆ. ಈ ಸಮಾಜದಲ್ಲಿ ಮತ್ತು ಈ ದೇಶದಲ್ಲಿ ಕೆಲವೊಂದು ದುಷ್ಟ ಶಕ್ತಿಗಳು ಅಶಾಂತಿಯನ್ನುಂಟು ಮಾಡಲಿಕ್ಕೆ ಕೆಲವೊಂದು ಶಕ್ತಿಗಳನ್ನು ಸಂಯೋಜನೆ ಮಾಡುತ್ತಿವೆ. ಈಗಾಗಲೇ ಇದರ ಬಗ್ಗೆ ಸರ್ಕಾರಕ್ಕೆ ಸಾಕಷ್ಟು ಮಾಹಿತಿಗಳು ಬಂದಿರಬಹುದು. ಯಾವ ದುಷ್ಟಶಕ್ತಿಗಳು ಇವೆ ಬಹುಶಃ ಅವು ವಿದೇಶಿ ಶಕ್ತಿಗಳ ಕೈವಾಡವಿರಬಹುದು. ಈವೊಂದು ಅಶಾಂತಿಯ ಪರಿಸ್ಥಿತಿಯನ್ನು ಯಾರು ಉಂಟು ಮಾಡುತ್ತಿದ್ದಾರೆ ಅಂತಹವರ ಮೇಲೆ ಕಠಿಣ ಕ್ರಮವನ್ನು ಕೈಗೊಳ್ಳಬೇಕು. ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಈ ರೀತಿಯಾದ ಕೆಲವು ಘಟನೆಗಳು ನಡೆದಾಗ ಗ್ಲಾಸ್ ಹೌಸ್‌ನಲ್ಲಿ ನಾಲ್ಕೈದು ಪುತ್ಥಳಿಗಳು ಪ್ರತಿಷ್ಠಾಪನೆಯಾಗಿದೆ. ಬೇರೆ ಬೇರೆ ದೊಡ್ಡ ದೊಡ್ಡ ವ್ಯಕ್ತಿಗಳ ಪ್ರತಿಮೆಗಳು ಪ್ರತಿಷ್ಠಾಪನೆಯಾಗಿವೆ. ಈ ರೀತಿಯಾದ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಮೂರ್ತಿ ಪ್ರತಿಷ್ಠಾಪನೆಯನ್ನು ರಕ್ಷಣೆ ಮಾಡುವ ಕೆಲಸವಾಗಬೇಕಾಗುತ್ತದೆ. ಸರ್ಕಾರ ಈ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು. ಇದರಲ್ಲಿ ಯಾರ ಕೈವಾಡವಿದೆಯೆಂದುದನ್ನು ತಕ್ಷಣ ಪತ್ತೆ ಹಚ್ಚಿ ಕಠಿಣ ಕ್ರಮ ಕೈಗೊಳ್ಳುವಂತಹ ಕೆಲಸ ಆಗಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಅಧ್ಯಕ್ಷರು:- ಈಗ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿಲ್ಲ. ಇನ್ನೊಂದು ವಿಷಯ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದು ಇದೆ. ಇದು ಆಗಲಿ ಅಷ್ಟರಲ್ಲಿ ಅವರು ಬರುತ್ತಾರೇನೋ ನೋಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಗೃಹಸಚಿವರು ಮೇಲ್ಮನೆಯಲ್ಲಿದ್ದಾರೆ. ಈ ಸಭೆಗೆ ಬರುತ್ತೇನೆಂದು ಹೇಳಿದ್ದಾರೆ.

ಅಧ್ಯಕ್ಷರು:- ಅಷ್ಟರವರೆಗೆ ಇನ್ನೊಂದು ವಿಷಯ ಇದೆ. ಅದು ಆಗಲಿ ಅಷ್ಟರಲ್ಲಿ ಅವರು ಬರಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ:- (ಕನಕಪುರ) ಮಾನ್ಯ ಅಧ್ಯಕ್ಷರೆ. ಇದಕ್ಕೆ ಮಾನ್ಯ ಗೃಹ ಸಚಿವರೇ ಉತ್ತರ ಕೊಡಬೇಕೆಂದೇನೂ ಇಲ್ಲ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಉತ್ತರ ಕೊಡಬಹುದು. ಏಕೆಂದರೆ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲಿ ಮೇಜರ್ ಲಾ ಅಂಡ್ ಅಂರ್ಡರ್ ಪ್ರಾಬ್ಲಮ್ ಏನಿದೇ ಅದು ತಮಗೆ ಗೊತ್ತಿರತಕ್ಕದ್ದೆ ಆಗಿದೆ. ಕೊಪ್ಪಳದಲ್ಲಿ ನಡೆದಿರತಕ್ಕದ್ದು ಏನಿದೆ ಅದು ಮೇಲ್ಗಡೆ ಇರತಕ್ಕ ಪೊರ ಅಷ್ಟೆ. ಮುಂದಿನ ಸಾಲಿನಲ್ಲಿ ಕುಳಿತಿರತಕ್ಕವರು ಈ ಕಡೆ ಇದ್ದಾಗ ಇಂತಹ ಘಟನೆಗಳು ನಡೆದಾಗ ಏನು ಮಾತನಾಡಿದ್ದರೆ ಎನ್ನುವುದನ್ನು ನಾನು ಈಗ ಹೇಳಲಿಕ್ಕೆ ಹೋಗುವುದಿಲ್ಲ. ಒಂದನ್ನಂತೂ ನಾನು ಹೇಳಬೇಕಾಗುತ್ತದೆ. ನಡೆದಿರತಕ್ಕ ಘಟನೆಯನ್ನು ನಾವೆಲ್ಲರೂ ಸಹಿತ ಪಕ್ಷಾತೀತವಾಗಿ ಖಂಡಿಸಬೇಕು. ಇದು ಮೊದಲನೆಯದು. ಇನ್ನು ಎರಡನೆಯದಾಗಿ, ಇದರಲ್ಲಿ ಸರ್ಕಾರದ ವಿಫಲತೆ ಇದೆ. ಪೋಲೀಸ್ ಇಲಾಖೆಯದು ಮುಖ್ಯವಾಗಿ ವಿಫಲತೆ ಇದೆ. ಉದಾಹರಣೆಗೆ ಕೊಪ್ಪಳದ ಘಟನೆಯನ್ನು ತೆಗೆದುಕೊಳ್ಳುವುದಾದರೆ ಒಂದು ವಾರದ ಹಿಂದೆ ಈ ಇನ್ಸಿಡೆಂಟ್ ನಡೆದಿದೆ ಈ ಇನ್ಸಿಡೆಂಟ್ ನಡೆದ ಒಂದು ವಾರದಲ್ಲಿ ಎಷ್ಟು ಸಾರಿ ಕೊಪ್ಪಳಕ್ಕೆ ಎಸ್‌ಪಿಯವರು ಡಿವೈಎಸ್‌ಪಿಯವರು ಭೇಟಿ ಕೊಟ್ಟಿದ್ದಾರೆ? ಡಿವೈಎಸ್‌ಪಿಯವರಿಗೆ ಅಂತಹ ದೊಡ್ಡ ಕೆಲಸವಾದರೂ ಏನು? ಅವರು ಅಲ್ಲಿಯೇ ಇರುತ್ತಾರೆ. ಭೇಟಿ ಕೊಟ್ಟಿದ್ದಾರೆಯೇ ಕ್ರೈಮ್ ಆದಮೇಲೆ ಫಿನಿಷ್‌ಮೆಂಟ್ ಮಾಡುವುದು ಕ್ರೈಮ್ ಡಿಟೆಕ್ಷನ್ ಮಾಡತಕ್ಕದ್ದು ಒಂದು. Crime prevention is more important, ನಿಮ್ಮ ಇಂಟೆಲಿಜೆನ್ಸ್ ವಿಂಗ್ ಏನು ಕೆಲಸ ಮಾಡುತ್ತಿದೆ? ಎರಡು ಇಂಟೆಲಿಜೆನ್ಸ್ ಇದೆ. ಒಂದು ಮುಖ್ಯಮಂತ್ರಿಗಳಿಗೆ ಅಟ್ಯಾಜ್ ಆಗಿದೆ. ಇನ್ನೊಂದು ಹೋಮ್ ಮಿನಿಸ್ಟರಿಗೆ ಅಟ್ಯಾಚ್ ಆಗಿದೆ. ಸ್ಪೆಷಲ್ ಬ್ರಾಂಚ್‌ನಲ್ಲಿ ನಾಲ್ಕು ಪೋಲೀಸ್ ಕಾನ್‌ಸ್ಟೇಬಲ್‌ಗಳು ಪ್ರತಿಯೊಂದು ಪೋಲೀಸ್ ಸ್ಟೇಷನ್‌ಗೂ ಕೂಡ ಅಟ್ಯಾಚ್ ಆಗಿದ್ದಾರೆ. ಇಂತಹ ಕಡೆ ಗಲಾಟೆ ಮಾಡುತ್ತಾರೆಂದು ನಿಮಗೆ ಪ್ರತಿ ಆರು ಗಂಟೆಗೆ ಮುಖ್ಯಮಂತ್ರಿಗಳ ಇಂಟಲಿಜೆನ್ಸ್‌ನಿಂದ ಇನ್ ಫಮೇಶನ್ ಕೊಡುತ್ತಾರೆ. ಇಂಥಿಂಥ ಕಡೆಗಳಲ್ಲಿ ಇಂಥಿಂಥ ಘಟನೆಗಳು ಆಗಿವೆ ಎಂದು ಮಾಹಿತಿ ಕೊಡುತ್ತಾರೆ. 13 ವರ್ಷದ ಹೆಣ್ಣುಮಗಳ ಮೇಲೆ ಅತ್ಯಾಚಾರವಾದರೂ ಅದನ್ನು ತಮ್ಮ ಗಮನಕ್ಕೆ ತರುತ್ತಾರೆ. ನಾವು ಏಕೆ ಸರ್ಕಾರದ ಮೇಲೆ ಜವಾಬ್ದಾರಿಯನ್ನು ಹಾಕುತ್ತಿದ್ದೇವೆಂದರೆ, ಕೊಪ್ಪಳದಲ್ಲಿಯೇ ಎಸ್‌ಪಿಯವರು ಇದ್ದಾರೆ. ಅವರು ಸ್ಥಳಕ್ಕೆ ಭೇಟಿ ಕೊಡುವುದಕ್ಕೆ ಏನು ತೊಂದರೆಯಾಗಿತ್ತು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಡಿವೈಎಸ್‌ಪಿಯವರು ಅಲ್ಲೇ ಇದ್ದಾರೆ. ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ಇಂತಹ ಅವಾಯ್ಡಬಲ್ ಕ್ರೈಮ್ ಇವತ್ತು ಅವಾಯ್ಡ್ ಮಾಡಬಹುದಾಗಿತ್ತು. ದುರ್ದೈವದ ವಿಚಾರ ಎಂದರೆ ಡಾ।। ಬಿ.ಆರ್. ಅಂಬೇಡ್ಕರ್‌ರವರನ್ನು ಒಂದು ವರ್ಗದ ಮುಖಂಡರನ್ನಾಗಿ ನಾವು ಮಾಡಿಕೊಂಡಿದ್ದೇವೆ. ಅಂತಹ ರಾಷ್ಟ್ರನಾಯಕರನ್ನು ಒಂದು ವರ್ಗದ ಮುಖಂಡರನ್ನಾಗಿ ಮಾಡಿಕೊಂಡಿದ್ದೇವೆ. ಹೀಗಾಗಿ ಅವರ ಪ್ರತಿಮೆ ಮೇಲೆ ಈ ತರಹದ ಒಂದು ಇನ್ಸಿಡೆಂಟ್ ಆಯಿತು ಅಂದರೆ ಡಾ।। ಅಂಬೇಡ್ಕರ್ ರವರ ಪ್ರತಿಮೆಯನ್ನು ಅಟ್ಯಾಕ್ ಮಾಡುವುದು ಶ್ರೀ ವಿಶ್ವೇಶ್ವರಯ್ಯನವರ ಪ್ರತಿಮೆಯನ್ನು ಅಟ್ಯಾಕ್ ಮಾಡುವುದು ಕೆಲವು ಕಡೆಗಳಲ್ಲಿ ಮಹಾತ್ಮಗಾಂಧೀಜಿಯವರ ಪ್ರತಿಮೆಯನ್ನು ಅಟ್ಯಾಕ್ ಮಾಡಿರತಕ್ಕದ್ದು ಸಹ ಇದೆ. ಆದರೆ ಅದು ಇನ್ನೂ ಜಾಸ್ತಿಯಾಗಿಲ್ಲ. ನಾವೆಲ್ಲರೂ ಇಲ್ಲಿ ಹೇಳುತ್ತೇವೆ. ಅಂತಹ ಕೆಲಸ ಮಾಡುವವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಿಲ್ಲ. ಬೀದರ್‌ನಲ್ಲಿ ಡಾ।। ಅಂಬೇಡ್ಕರ್‌ರವರ ಪ್ರತಿಮೆಯ

ಮೇಲೆ ಇದೇ ರೀತಿಯ ದುರ್ಘಟನೆ ನಡೆದ ಸನ್ನಿವೇಶದಲ್ಲಿ ಅದನ್ನು ಸ್ಥಳೀಯವಾಗಿ ಜಗಳಕ್ಕೋಸ್ಕರ ಮಾಡಿರತಕ್ಕ ಉದಾಹರಣೆ ಉಂಟು. ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು ಇದನ್ನು ಏಕೆ ಸರಾಸಗಟಾಗಿ ಮಾಡುತ್ತಾರೆಂದರೆ, ಏನೇ ಮಾಡಿದರೂ ಪೋಲೀಸರು ಕ್ರಮ ತೆಗೆದುಕೊಳ್ಳುವುದಿಲ್ಲ ಇದು ಬಹಳ ಮುಖ್ಯವಾಗಿ ಪೋಲೀಸ್ ಇಲಾಖೆಯ ಫೇಲ್ಯೂರ್ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಇವತ್ತು ನಾನು ಇದನ್ನು ಖಂಡನೆ ಮಾಡುವುದರ ಜೊತೆಗೆ ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ನೋಡಿಕೊಳ್ಳಬೇಕು. ಎಲ್ಲಿಲ್ಲಿ ಸಾಧ್ಯ ಅಲ್ಲಿ ಕೆಲವು ಕಡೆಗಳಲ್ಲಿ ಸರ್ಕಾರದ ಮತಿಯಿಂದ ಪ್ರತಿಮೆಗಳನ್ನು ನಿಲ್ಲಿಸಿದ್ದಾರೆ. ಎಲ್ಲಾ ಕಡೆ ಪ್ರತಿಮೆಗಳನ್ನು ರಕ್ಷಣೆ ಮಾಡುವುದಕ್ಕೆ ಆಗದಿರಬಹುದು. ಜಿಲ್ಲಾ ಕೇಂದ್ರಗಳಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಅದರಲ್ಲೂ ಪೋಲೀಸ್ ಠಾಣೆ ಎದುರುಗಡೆಯಲ್ಲಿಯೇ ಇಂತಹ ಘಟನೆಗಳು ಆಗುತ್ತವೆಂದರೆ ಅದನ್ನು ಯಾರು ಪ್ರೊಟೆಕ್ಟ್ ಮಾಡುತ್ತಾರೆ? ಆ ಜಿಲ್ಲಾ ಕೇಂದ್ರದಲ್ಲಿ ಏಳು ದಿವಸಗಳ ಹಿಂದೆ ಈ ಇನ್ಸಿಡೆಂಟ್ ಆದರೂ ಕೂಡ ಅಲ್ಲಿ ಯಾವುದೇ ಪ್ರಿವೆನ್ ಮೇಷರ್ಸ್ ತೆಗೆದುಕೊಳ್ಳಲಿಲ್ಲವೆಂದರೆ ಪೋಲೀಸ್‌ನವರಿಗೆ ನಾವು ಬೆನ್ನು ತಟ್ಟುವುದಕ್ಕೆ ಆಗುತ್ತದೆಯೇ? ಇದರ ಬಗ್ಗೆ ಆಡಳಿತ ನಡೆಸತಕ್ಕವರು ಸರ್ಕಾರ ತಾವು ಮಂತ್ರಿಗಳು ವಿಚಾರ ಮಾಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ನಾನು ಈ ಘಟನೆಯನ್ನು ಖಂಡಿಸುತ್ತೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಹುಬ್ಬಳ್ಳಿ, ಬೆಳಗಾಂ ಮತ್ತು ಮೈಸೂರಿನಲ್ಲಿ ಎಲ್ಲಾ ಕಡೆಗಳಲ್ಲಿ ಇಂತಹ ಘಟನೆಗಳು ಪ್ರಾರಂಭವಾಗುತ್ತದೆ. ಅಲ್ಲೆಲ್ಲಾ ಪ್ರಾರಂಭವಾದ ಮೇಲೆ ಅದನ್ನು ನೀವು ತಡೆಗಟ್ಟುವುದಕ್ಕೆ ಆಗುವುದಿಲ್ಲ. ದಯವಿಟ್ಟು ಇದನ್ನು ಖಂಡಿಸಿ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ. ಅಲ್ಲಿಯ ಕರ್ತವ್ಯನಿರತ ಪೋಲೀಸ್ ಅಧಿಕಾರಿಗಳನ್ನು ಕರೆಸಿ ಅವರ ಮೇಲೆ ಕ್ರಮ ತಗೆದುಕೊಳ್ಳಬೇಕಾಗುತ್ತದೆ. ಅನೇಕ ಸಂದರ್ಭದಲ್ಲಿ ಅವರೇ ಎತ್ತಿಕಟ್ಟುತ್ತಾರೆ. ಯಾವುದೋ ಕ್ರೈಮ್ ಮುಚ್ಚಿಹಾಕಿ ಕೊಳ್ಳುವುದಕ್ಕೆ ಇಂತಹ ಘಟನೆಗಳು ನಡೆಯಲಿ ಎಂದು ಹೇಳುವುದು ನನಗೆ ಗೊತ್ತಿದೆ. ಪೋಲೀಸ್ ಇಲಾಖೆಯ ಮೇಲೆ ಸರ್ಕಾರ ಸಂಪೂರ್ಣವಾಗಿ ಹಿಡಿತವನ್ನು ಸಾಧಿಸಿಲ್ಲ ಎನ್ನುವುದಕ್ಕೆ ಇದೊಂದು ಸ್ಪಷ್ಟವಾದ ನಿದರ್ಶನ ಅಷ್ಟೇ.

ಶ್ರೀಮತಿ ಕೆ.ವಿ. ಅನುಸೂಯಮ್ಮ ನಟರಾಜನ್(ಚಿಕ್ಕಬಳ್ಳಾಪುರ):- ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು. ದಿವಂಗತ ಡಾ|| ಬಿ.ಆರ್. ಅಂಬೇಡ್ಕರ್‌ರವರ ಪ್ರತಿಮೆಗೆ ಕೊಪ್ಪಳ ಜಿಲ್ಲೆಯಲ್ಲಿ ಆಗಿರುವ ಅವಮಾನವನ್ನು ನೋಡಿದರೆ ಮನಸ್ಸಿಗೆ ತುಂಬಾ ನೋವುಂಟಾಗುತ್ತದೆ. ಇಡೀ ರಾಷ್ಟ್ರಕ್ಕೆ ಕಾನೂನು ಬರೆದ ಸಂವಿಧಾನ ಶಿಲ್ಪಿ ಅಂತಹ ಮಹಾನ್ ವ್ಯಕ್ತಿಯ ಪ್ರತಿಮೆಯನ್ನು ವಿರೂಪಗೊಳಿಸಿರುವುದು ದುರದೃಷ್ಟಕರವಾದ ಸಂಗತಿ. ಹಿಂದುಳಿದ ಪರಿಶಿಷ್ಟ ಜಾತಿಯವರು ಹಳ್ಳಿಗಳಲ್ಲಿ ಸುಮ್ಮನೆ ಕಾಲಹರಣ ಮಾಡುತ್ತಿದ್ದರು. ಹಳ್ಳಿಗಳಲ್ಲಿ ಅವರಿಗೆ ನೀವು ಸ್ಕೂಲ್‌ಗೆ ಹೋಗಲಿಕ್ಕೆ ಒದಲಿಕ್ಕೆ ಯೋಗ್ಯತೆಯಿಲ್ಲವೆಂದು ಹೇಳುತ್ತಿದ್ದರು. ನೀವು ಡಾಕ್ಟರ್ ಆದರೆ ನಿಮ್ಮ ಕೈಯಿಂದ ಔಷಧಿ ಕುಡಿಯುವುದಿಲ್ಲವೆಂದು ಹೇಳುತ್ತಿದ್ದರು. ಈ ಜನರಿಗೆ ಕುಡಿಯಲಿಕ್ಕೆ ಶಾಲೆಯಲ್ಲಿ ನೀರು ಕೊಡುತ್ತಿರಲಿಲ್ಲ. ಕೆರೆಯಲ್ಲಿ ಯಾರಾದರೂ ಹರಿಜನರು ನೀರು ಕುಡಿದರೆ ಆ ಕೆರೆಯ ನೀರನ್ನು ಯಾರೂ ಉಪಯೋಗಿಸಬೇಡಿಯೆಂದು ಹೇಳುತ್ತಿದ್ದರು. ಇದನ್ನು ನೋಡಿ ಡಾ|| ಅಂಬೇಡ್ಕರ್‌ರವರಿಗೆ ತುಂಬಾ ನೋವುಂಟಾಯಿತು. ಅವರೂ ಸಹ ಇಂತಹ ನೋವನ್ನು ಚಿಕ್ಕಂದಿನಲ್ಲಿಯೇ ಅನುಭವಿಸಿದ್ದರು. ಹಿಂದೆ ಈ ಜನ ಓದಲಿಕ್ಕೆ ಓಡಾಡಲಿಕ್ಕೆ,

ನೀರು ಕುಡಿಯುವುದಕ್ಕೆ ಸ್ವಾತಂತ್ರ್ಯವಿರಲಿಲ್ಲ. ಡಾ।। ಅಂಬೇಡ್ಕರ್‌ರವರು ಇಡೀ ರಾಷ್ಟ್ರಕ್ಕೆ ಸಂವಿಧಾನವನ್ನು ಬರೆದು ಎಲ್ಲರಿಗೂ ಸಮಾನವಾದ ಅವಕಾಶ ಏನೂ ಕಲ್ಪಿಸಿರದಿದ್ದರೆ ನಾವೆಲ್ಲರೂ ಈ ತರಹ ಇಲ್ಲಿ ಬಂದು ಸದನದಲ್ಲಿ ನಿಮ್ಮೆಲ್ಲರ ಜೊತೆ ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅವರು ಕಷ್ಟಪಟ್ಟು ಓದಿ ದಿಟ್ಟತನದಿಂದ ಮುಂದೆ ಬಂದಿದ್ದಾರೆ. ಅವರ ತಂದೆಯವರು ಕೂಲಿ ಮಾಡಿದ ಹಣದಲ್ಲಿ ಊಟಕ್ಕೆ ಸ್ವಲ್ಪ, ಅಂಬೇಡ್ಕರ್‌ರವರ ಓದಿಗೆ ಸ್ವಲ್ಪ ಕೊಟ್ಟಿದ್ದಾರೆ. ಆ ಹಣವನ್ನು ಉಪಯೋಗಿಸಿಕೊಂಡು ಓದಿ ಕಾನೂನು ಎನ್ನುವ ಸಂವಿಧಾನವನ್ನು ಬರೆದರು. ಇದರಿಂದ ಪ್ರತಿಯೊಬ್ಬ ಹಿಂದುಳಿದ ಪರಿಶಿಷ್ಟ ಜಾತಿಯವರು ಪರಿಶಿಷ್ಟ ಪಂಗಡದವರು ಮುಂದೆ ಬರಲಿಕ್ಕೆ ಅನುಕೂಲವಾಯಿತು. ಇವರು ಪದವೀಧರರಾದ ಮೇಲೆ ಕೆಲಸಕ್ಕೆ ಅರ್ಜಿ ಹಾಕಲಿಕ್ಕೆ ಜೆರಾಕ್ಸ್ ಕಾಪಿ ಮಾಡಿಸಲಿಕ್ಕೆ ಕೂಲಿ ಹಣ ಸಹ ಸಾಲುತ್ತಿರಲಿಲ್ಲ. ಅವರು ಸಂವಿಧಾನದಲ್ಲಿ ಅವಕಾಶವನ್ನು ಕಲ್ಪಿಸದಿದ್ದರೆ ನಾವು ಈ ತರಹ ನಿಮ್ಮ ಜೊತೆ ಶಾಸಕರು, ಮಂತ್ರಿಗಳು, ಮುಖ್ಯಮಂತ್ರಿಗಳ ಜೊತೆಯಲ್ಲಿ ಕುಳಿತುಕೊಳ್ಳಲಿಕ್ಕೆ ಆಗುತ್ತಿರಲಿಲ್ಲ. ಅಂತಹ ಪವಿತ್ರರಾದ ಮಹಾನುಭಾವರ ಪ್ರತಿಮೆ ಇಟ್ಟು ನಾವು ಪೂಜಿಸುವುದರಲ್ಲಿ ತಪ್ಪೇನು? ಕಾನೂನು ಪ್ರಕಾರ ನಾವಿಲ್ಲಿ ಕುಳಿತುಕೊಂಡು ಮಾತನಾಡುವುದರಲ್ಲಿ ತಪ್ಪೇನು? ನಾವು ಅವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಿ ಪೂಜಿಸಿದರೆ. ಅವರ ಪ್ರತಿಮೆ ಕೈಗೆ ಬಳೆ ತೊಡಿಸುವುದು ಸರಿಯೇ? ಅವರ ಕೈಗೆ ಬಳೆ ತೊಡಿಸುತ್ತಾರೆಂದರೆ ಅವರೇನು ಕ್ಲೈಬವರೇನು? ಇಂತಹ ಜನರೂ ಸಹ ಇದ್ದಾರೆಂದು ನನಗೆ ತುಂಬಾ ನೋವಾಗುತ್ತಿದೆ. ಆ ಮೂರ್ತಿಗೆ ಬಣ್ಣವನ್ನು ಸುರಿದು ತಮಾಷೆ ಮಾಡುವುದು ಟೋಪಿ ಇಡುವುದು ಈ ತರಹ ಅವಮಾನ ಮಾಡಿದ್ದಾರೆ. ದಯವಿಟ್ಟು ಯಾರು ಇಂತಹ ಕೆಲಸ ಮಾಡಿದ್ದಾರೆ ಅಂತಹವರನ್ನು ತಕ್ಷಣ ಗುರುತಿಸಿ ಶಿಕ್ಷೆಗೆ ಗುರಿಪಡಿಸಬೇಕು ಮತ್ತು ಅದನ್ನು ಈ ಸದನಕ್ಕೆ ತಿಳಿಸಬೇಕು. ಈ ವಿಚಾರದಲ್ಲಿ ನೋಡೋಣ ಮಾಡೋಣವೆಂದು ಹೇಳಬಾರದು. ಇಡೀ ರಾಷ್ಟ್ರಕ್ಕೆ ಕಾನೂನು ಬರೆದವರಿಗೆ ಅಪಮಾನ ಮಾಡಿದ ದುಷ್ಕರ್ಮಿಗಳಿಗೆ ಕಾನೂನು ರೀತಿಯಲ್ಲಿಯೇ ಕ್ರಮ ತೆಗೆದುಕೊಂಡು ಶಿಕ್ಷೆ ನೀಡಬೇಕು. ಮತ್ತೆ ಇಂತಹ ಕೃತ್ಯಗಳು ಮರುಕಳಿಸದಂತೆ ನೋಡಿಕೊಳ್ಳಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ತಾವು ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಮತ್ತೊಮ್ಮೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಇದು ಅತ್ಯಂತ ಕಳವಳದಾಯಕವಾದಂಥ ಬೆಳವಣಿಗೆ, ಕೊಪ್ಪಳದಲ್ಲಿ ನಡೆದಿರತಕ್ಕಂಥ ಈ ಘಟನೆ ಬಗ್ಗೆ ನಮ್ಮ ಗಮನವನ್ನು ಸೆಳೆಯಬೇಕಾಗಿರುವುದು ಬಹಳ ಅಗತ್ಯ ಇದೆ. ಡಾ।। ಅಂಬೇಡ್ಕರ್‌ರವರು ಶ್ರೀ ಬಸವಣ್ಣನವರು, ಛತ್ರಪತಿ ಶಿವಾಜಿ ಮಹಾರಾಜ್, ಟಿಪ್ಪುಸುಲ್ತಾನ್ ಇಂಥವರ ಸ್ಮರಣಾರ್ಥ ನೂರಾರು ಪ್ರತಿಮೆಗಳು ಇಡೀ ದೇಶಾದ್ಯಂತ ಇವೆ. ರಾಜ್ಯಾದ್ಯಂತ ಇವೆ. ಇಂತಹ ಘಟನೆಗಳನ್ನು ಮಾಡುವುದರ ಮೂಲಕ ಪಂಗಡ-ಪಂಗಡಗಳ ಮಧ್ಯೆ ಮತಗಳ ಬಗ್ಗೆ, ಧರ್ಮಗಳ ಬಗ್ಗೆ ವಿಭಜನೆ ಮಾಡಿ ಅದರಲ್ಲಿ ಸಂತೋಷವನ್ನು ನೋಡತಕ್ಕಂಥ ಕೆಲವರು ನಮ್ಮ ಸಮಾಜದಲ್ಲಿ ಇದ್ದಾರೆ ಎನ್ನತಕ್ಕಂಥಾದ್ದನ್ನು ಈ ಒಂದು ಘಟನೆ ನಮಗೆ ತೋರಿಸಿಕೊಟ್ಟಿದೆ. ಇದು ಸಾರ್ವತ್ರಿಕವಾಗಿ ಖಂಡನೆಗೆ ಒಳಗಾಗಬೇಕಾಗಿರತಕ್ಕಂಥ ಒಂದು ಬೆಳವಣಿಗೆ. ಇಂತಹ ಬೆಳವಣಿಗೆಗಳನ್ನು ಯಾವ ನಾಗರಿಕ ಸಮಾಜವೂ ಸಹಿಸುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಇದರ ಬಗ್ಗೆ ಅತ್ಯಂತ ಕಠಿಣವಾದಂಥ

ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಯಾರು ಇದಕ್ಕೆ ಕಾರಣೀಭೂತರಾಗಿದ್ದಾರೆ ಅವರ ಬೇರುಗಳನ್ನು ಸೂಕ್ಷ್ಮವಾಗಿ ನಾವು ಭೇಧಿಸಿ ಪೋಲೀಸ್ ಇಲಾಖೆ, ಪೋಲೀಸಿನವರು ಈ ದಿಸೆಯಲ್ಲಿ ತಪ್ಪಿತ್ತಸ್ಥರ ವಿರುದ್ಧವಾದಂಥ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ಕಾಲದಲ್ಲಿಯೇ ಇದನ್ನೇ ಒಂದು ಕಾರಣವನ್ನಾಗಿ ಮಾಡಿಕೊಂಡು ಮಿಕ್ಕ ನಗರ ಪ್ರದೇಶಗಳಲ್ಲಿ, ಮಿಕ್ಕ ಪ್ರದೇಶಗಳಲ್ಲಿ ಇದರ ಬಗ್ಗೆ ನಾವು ಪ್ರತಿರೋಧವನ್ನು ವ್ಯಕ್ತಪಡಿಸತಕ್ಕಂಥಾದ್ದು ಸಾರ್ವತ್ರಿಕವಾದದ್ದು. ಆದ್ದರಿಂದ ಶಾಂತಿಯುತವಾದಂಥ ಪ್ರತಿಭಟನೆಯನ್ನು ಮಾಡಲಿಕ್ಕೆ ಸರ್ಕಾರ ಅವಕಾಶ ಕೊಡುತ್ತದೆ. ಆದರೆ ಇದನ್ನೇ ಒಂದು ಕಾರಣವನ್ನಾಗಿ ಮಾಡಿಕೊಂಡು ಸಮಾಜದಲ್ಲಿ ಮತ್ತೆ ಒಂದು ದೊಡ್ಡ ದಳ್ಳುರಿಯನ್ನು ಮಾಡಲಿಕ್ಕೆ ನಾವು ಅವಕಾಶವನ್ನು ಕೊಡತಕ್ಕಂಥಾದ್ದು ಸಾಧ್ಯವಿಲ್ಲ. ಮಾನ್ಯ ಸೋಮಶೇಖರ್‌ರವರು ಮತ್ತು ಮಾನ್ಯ ಕರಡಿಸಂಗಣ್ಣನವರು ಮತ್ತು ಮಾನ್ಯ ಸಿಂಧ್ಯಾರವರು ಹಾಗೂ ಶ್ರೀಮತಿ ಅನುಸೂಯಮ್ಮನವರು ಇದರ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಈ ಕಳಕಳಿಗೆ ನಾನು ಸ್ಪಂದಿಸುತ್ತೇನೆ. ಮಾನ್ಯ ಸೋಮಶೇಖರ್ ಅವರು ಹೇಳಿದರು. ಏನೆಂದರೆ ಈ ಪ್ರತಿಮೆಗಳ ರಕ್ಷಣೆಗೆ ನಾವು ವಿಶೇಷವಾದಂಥ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಇದು ನಾವೆಲ್ಲರೂ ಒಟ್ಟಾರೆ ಸೇರಿ ಹೇಗೆ ರಕ್ಷಣೆ ಮಾಡುವುದಕ್ಕೆ ಸಾಧ್ಯ? ಈಗ ಒಂದು ಜಾತ್ರೆ ಮೈದಾನದಲ್ಲಿ ಒಂದು ಮೂರ್ತಿಯನ್ನು ಹಾಕಿರುತ್ತಾರೆ. ಅಲ್ಲಿ ಪೋಲೀಸ್ ಸ್ಟೇಷನ್ ಎದುರಿಗಿದ್ದರೆ ಪೋಲೀಸಿನವರು ಅದರ ರಕ್ಷಣೆ ಕಾರ್ಯಭಾರವನ್ನು, ಆ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಆದರೆ ಬೇರೆ ಕಡೆ ಇದ್ದರೆ ಹೇಗೆ? ಕೆಲವೊಂದು ಸಾರಿ ಡಾ|| ಬಾಬಾಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಅಪಾರ ಅಭಿಮಾನದಿಂದ ಕೆಲವೊಂದು ಕಾಲೋನಿಗಳಲ್ಲಿ, ಕೆಲವೊಂದು ಪ್ರದೇಶಗಳಲ್ಲಿ ಅವರ ಈ ಪ್ರತಿಮೆಗಳನ್ನು ಮಾಡಿರುತ್ತಾರೆ. ಅಂತಹ ಪ್ರದೇಶಗಳಲ್ಲಿ ನಾವು ವಿಶೇಷವಾದಂಥ ರಕ್ಷಣೆಯನ್ನು ಕೊಡಲಿಕ್ಕೆ ಹೇಗೆ ಸಾಧ್ಯವಾಗಬಹುದು ಎನ್ನುವುದರ ಬಗ್ಗೆ ತಾವು ಸಲಹೆ ಸೂಚನೆಗಳನ್ನು ನಮಗೆ ಕೊಟ್ಟರೆ ಅದನ್ನು ನಾವು ಬಹಳ ಜವಾಬ್ದಾರಿಯುತವಾದ ರೀತಿಯಲ್ಲಿ ಪರಿಶೀಲನೆ ಮಾಡುತ್ತೇವೆ. ಕೊಪ್ಪಳದ ಈ ಭಾಗದಲ್ಲಿ ನಡೆದಿರತಕ್ಕಂಥ ಈ ಘಟನೆ ಬಗ್ಗೆ ಹೆಚ್ಚಿನ ವಿವರಗಳನ್ನು ನಮ್ಮ ಮಾನ್ಯ ಗೃಹಸಚಿವರು ಈ ಸದನಕ್ಕೆ ಒದಗಿಸಿಕೊಡುತ್ತಾರೆ. ಆದರೆ ನಾನು ಸೀಮಿತವಾದಂಥ ಉದ್ದೇಶದಿಂದ ಇಲ್ಲಿ ನಿಂತಿದ್ದೇನೆ. ಅದೇನೆಂದರೆ, ಇಂಥಾದ್ದನ್ನು ಸಾರ್ವತ್ರಿಕವಾಗಿ ಇಡೀ ಸದನ ಖಂಡಿಸುತ್ತದೆ. ಇದು ಒಂದು ಎಚ್ಚರಿಕೆಯ ರೂಪದಲ್ಲಿ ಕೂಡ ಇಡೀ ರಾಜ್ಯದಲ್ಲಿ ಈ ಕಿಡಿಗೇಡಿಗಳಿಗೆ ಇರಬೇಕು ಎನ್ನುವಂಥ ದೃಷ್ಟಿಯಿಂದ ನಾನು ಮಧ್ಯಪ್ರವೇಶ ಮಾಡಿದ್ದು, ಈ ಸದನದಿಂದ ಒಟ್ಟಾರೆ ನಮ್ಮ ಕಳಕಳಿ ಮತ್ತು ಕಳವಳ ಎರಡನ್ನೂ ಕೂಡ ನಾವು ಈ ರಾಜ್ಯಕ್ಕೆ ಹೇಳಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು:- ವೆರಿಗುಡ್,

(ಆ) ರಾಜ್ಯದಲ್ಲಿ ಗುತ್ತಿಗೆದಾರರು ಪ್ರತಿಭಟನೆ ನಡೆಸುತ್ತಿರುವ ಬಗ್ಗೆ -

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು:- ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಇನ್ನೊಂದು ಮಹತ್ವದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಬಯಸುತ್ತೇನೆ. ಇವತ್ತು ಇಡೀ ರಾಜ್ಯದಲ್ಲಿ ಇರುವಂಥ ಕಂಟ್ರಾಕ್ಟರ್ಸ್ ತಮ್ಮ ಸಂಘದ ಮುಖಾಂತರ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದಾರೆ. ಬಹುಶಃ ಇದು ಪತ್ರಿಕೆಗಳಲ್ಲಿ ಬಂದಿದೆ ಮತ್ತು ಸರ್ಕಾರದ ಗಮನಕ್ಕೂ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇಲ್ಲೇ ಇದ್ದಾರೆ. ಕೆಲವು ದಿವಸಗಳ ಹಿಂದೆ